ಗೋಕಾಕ್ ತಾಲ್ಲೂಕಿನಲ್ಲಿ ಗಂಗಾ ಕಲ್ಯಾಣ ಯೋಜನೆ

೭೭೩. ಶ್ರೀ ಎಂ. ಎಲ್. ಮುತ್ತಣ್ಣನವರ್ (ಗೋಕಾಕ್).— ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗೆ ದಯವಿಟ್ಟು ಉತ್ತರಿಸುವರೆ ?

ಅ) ಗೋಕಾಕ್ ತಾಲ್ಲೂಕಿನಲ್ಲಿ ಗಂಗಾ ಕಲ್ಯಾಣ ಯೋಜನೆಗೆ ಎಷ್ಟು ಗ್ರಾಮಗಳನ್ನು ಆಳವಡಿಸಲಾಗಿದೆ ?

ಆ) ಇಲ್ಲಿಯವರೆಗೆ ಸದರಿ ಯೋಜನೆಗೆ ತಗಲಿರುವ ವೆಚ್ಚವೆಷ್ಟು ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

ಅ) ೯ ಗ್ರಾಮಗಳು ಅದರಲ್ಲಿ ೪ ಗ್ರಾಮಗಳಲ್ಲಿ ಯೋಜನೆಯು ಪೂರ್ಣಗೊಂಡಿವೆ. ಎರಡು ಗ್ರಾಮಗಳಲ್ಲಿ ಪ್ರಗತಿಯಲ್ಲಿದೆ. ಉಳಿದ ಮೂರು ಗ್ರಾಮಗಳಲ್ಲಿ ಯೋಜನೆಗಳು ವಿಫಲವಾಗಿವೆ.

ಆ) ರೂ. ೯.೬೪ ಲಕ್ಷ.

ಗೋಕಾಕ್ ತಾಲ್ಲೂಕಿನ ಕನಸಗೇರಿ ಏತ ನೀರಾವರಿ ಯೋಜನೆ ಬಗ್ಗೆ

೭೭೪. ಶ್ರೀ ಎಂ. ಎಲ್. ಮುತ್ತಣ್ಣನವರ್ (ಗೋಕಾಕ್).— ಮಾನ್ಯ ಸಣ್ಣ ನೀರಾವರಿ ಮತ್ತು ಏತ ನೀರಾವರಿ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕನಸಗೇರಿ ಏತ ನೀರಾವರಿ ಕೆಲಸ ಆಯವ್ಯಯದಲ್ಲಿ ಸೇರಿದ್ದರೂ ಪ್ರಾರಂಭಿಸದಿರಲು ಕಾರಣವೇನು ?

ಆ) ಈ ಕೆಲಸವನ್ನು ಯಾವಾಗ ಪ್ರಾರಂಭ ಮಾಡಲಾಗುವುದು ?

ಇ) ಈ ಯೋಜನೆಯಿಂದ ನೀರಾವರಿಯಾಗುವ ಕ್ಷೇತ್ರ ಎಷ್ಟು ?

ಈ) ಈ ಯೋಜನೆಯಲ್ಲಿ ಬರುವ ಗ್ರಾಮಗಳಾವುವು ?

ಶ್ರೀ ಕೆ. ಕೃಷ್ಣಮೂರ್ತಿ (ಸಣ್ಣ ನೀರಾವರಿ ಮತ್ತು ಏತ ನೀರಾವರಿ ರಾಜ್ಯ ಮಂತ್ರಿಗಳು).—

ಅ) ಈ ಕಾಮಗಾರಿಯನ್ನು ವಿಜಾಪುರದ ಕೃಷ್ಣಾ ಜಲಾನಯನ ಏತ ನೀರಾವರಿ ನಿಗಮ ನಿಯಮಿತವು ಕಾರ್ಯಗತಗೊಳಿಸಬೇಕಾಗಿದ್ದು, ಅದರ ಪರಿಶೀಲನೆಯಲ್ಲಿದೆ.

ಆ) ಆರ್ಥಿಕ ಮತ್ತು ತಾಂತ್ರಿಕವಾಗಿ ಸೂಕ್ತ ಕಂಡುಬಂದಲ್ಲಿ ಮುಂದಿನ ಕ್ರಮ ತೆಗೆದುಕೊಳ್ಳಲಾಗುವುದು.

ಇ) ೧೬೨೦ ಹೆಕ್ಟೇರುಗಳು.

ಈ) ಕನಸಗೇರಿ, ಬೆಣಚನಮರಡಿ, ಉರಬಿನಟ್ಟಿ, ಸೀಗಿಹೊಳೆ, ಗದ್ದೆ ಹೊಳೆ, ದಾಸನಹಟ್ಟಿ, ಅಕ್ಕತಂಗಿಯರ ಹಾಳ್, ಈರನಹಟ್ಟಿ ಮತ್ತು ಮಾಡಿವಾಳ.

ಹೊಸದುರ್ಗ ತಾಲ್ಲೂಕಿನಲ್ಲಿ ತೆಂಗು ಒಡ್ಡು ನಿರ್ಮಾಣ

೭೭೭. ಶ್ರೀ ಜಿ. ರಾಮದಾಸ್ (ಹೊಸದುರ್ಗ) — ಮಾನ್ಯ ತೋಟಗಾರಿಕೆ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಹೊಸದುರ್ಗ ತಾಲ್ಲೂಕಿನಲ್ಲಿ ಹೊಸ ಕೆರೆಗಳ ನಿರ್ಮಾಣಕ್ಕೆ ಆಣೆ ಹಾಕಿರುವುದರಿಂದ ಪೆಚ್ಚಿನ ಸಂಖ್ಯೆಯಲ್ಲಿ ತೆಂಗು ಒಡ್ಡುಗಳನ್ನು ನಿರ್ಮಿಸುವ ಯೋಜನೆಗಳನ್ನು ಹಾಕಿಕೊಳ್ಳಲಾಗಿದೆಯೆ ?

ಆ) ಹಾಗಿದ್ದಲ್ಲಿ ೧೯೮೮-೮೯ನೇ ಸಾಲಿನಲ್ಲಿ ಈ ತಾಲ್ಲೂಕಿನಲ್ಲಿ ಎಷ್ಟು ತೆಂಗು ಒಡ್ಡುಗಳನ್ನು ನಿರ್ಮಿಸಲಾಗುವುದು ?

ಶ್ರೀ ಪೈ, ಕೆ. ರಾಮಯ್ಯ (ತೋಟಗಾರಿಕೆ ರಾಜ್ಯ ಸಚಿವರು).—

ಅ) ಹೌದು.

ಆ) ಇನ್ನೂ ಈ ಬಗ್ಗೆ ಸರ್ವೆ ಕೆಲಸ ನಡೆಯುತ್ತಿರುವುದರಿಂದ ಎಷ್ಟು ತೆಂಗು ಒಡ್ಡುಗಳನ್ನು ೧೯೫೫-೫೬ನೇ ಸಾಲಿಗೆ ನಿರ್ಮಿಸಲಾಗುವುದು ಎಂದು ಖಚಿತವಾಗಿ ತಿಳಿಸಲು ಸಾಧ್ಯವಿಲ್ಲ. ಚಿತ್ರದುರ್ಗ ಜಿಲ್ಲಾ ಪರಿಷತ್ತು ೧೯೫೫-೫೬ನೇ ಸಾಲಿನ ಯೋಜನೆಯನ್ನು ಅಂತಿಮವಾಗಿ ಅನುಮೋದಿಸಿದ ನಂತರ ಖಚಿತವಾಗಿ ತಿಳಿಸಬಹುದು.

ಹೊಸದುರ್ಗದಲ್ಲಿ ತಾಲ್ಲೂಕು ಕಛೇರಿ ಕಾಂಪ್ಲೆಕ್ಸ್ ಕಟ್ಟಡ ನಿರ್ಮಾಣದ ಬಗ್ಗೆ

೭೭೫. ಶ್ರೀ ಜಿ. ರಾಮದಾಸ್ (ಹೊಸದುರ್ಗ).—ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಹೊಸದುರ್ಗ ಪಟ್ಟಣದಲ್ಲಿ ಲೋಕೋಪಯೋಗಿ ಇಲಾಖೆಯಿಂದ ನಿರ್ಮಿಸುತ್ತಿರುವ ಕಛೇರಿ ಕಾಂಪ್ಲೆಕ್ಸ್ ಕಟ್ಟಡದ ನಿರ್ಮಾಣಕ್ಕೆ ಇದುವರೆಗೆ ಎಷ್ಟು ಹಣ ಖರ್ಚಾಗಿದೆ?

ಆ) ಈ ಕಾಮಗಾರಿ ಕಾರ್ಯ ಮುಕ್ತಾಯವಾಗಲು ಎಷ್ಟು ಕಾಲ ಬೇಕಾಗಬಹುದು?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಸಚಿವರು),—

ಅ) ೧೯೫೭ನೇ ಡಿಸೆಂಬರ್‌ವರೆಗೆ ಈ ಕಾಮಗಾರಿಗಾಗಿ ೧೭,೯೫,೦೦೦ ರೂ.ಗಳನ್ನು ವೆಚ್ಚ ಮಾಡಲಾಗಿದೆ.

ಆ) ಬಾಕಿ ಕೆಲಸವನ್ನು ಮುಗಿಸಲು ಒಟ್ಟು ಏಳು ಲಕ್ಷ ರೂ.ಗಳು ಬೇಕಾಗುತ್ತದೆ. ಹಣದ ಲಭ್ಯತೆಯನ್ನಾಧರಿಸಿ ಕೆಲಸವನ್ನು ಆದಷ್ಟು ಬೇಗನೆ ಮುಗಿಸಲಾಗುವುದು.

ಜೂನಿಯರ್ ಕಾಲೇಜ್ ಮತ್ತು ಹೈಸ್ಕೂಲುಗಳಲ್ಲಿ ಪ್ರಯೋಗ ಶಾಲೆಯ ಫೀ ವಸೂಲಾತಿ

೭೯೯. ಶ್ರೀ ಬಿ. ಧರ್ಮಪ್ಪ (ಸಾಗರ).—ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕಿರಿಯ ಕಾಲೇಜು ಮತ್ತು ಪ್ರೌಢಶಾಲೆಗಳಲ್ಲಿ ಪ್ರತಿ ವರ್ಷವೂ ಪ್ರಯೋಗ ಶಾಲೆಯ ಶುಲ್ಕ ವಸೂಲಾತಿ ಮಾಡುತ್ತಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗೆ ವಸೂಲಿ ಮಾಡಿದ ಸದರಿ ಹಣವನ್ನು ಆಯಾಯ ಕಾಲೇಜುಗಳಿಗೆ ಬೇಕಾದ ಅಗತ್ಯದ ಸಾಮಾನುಗಳನ್ನು ಕೊಂಡುಕೊಳ್ಳಲು ಅವರಿಗೆ ಅನುವಂತಿಯನ್ನು ಕೊಡದೆ ತುಂಬಾ ತೊಂದರೆ ಯಾಗಿರುವ ವಿಷಯ ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಇ) ಈ ರೀತಿ ಪ್ರತಿ ವರ್ಷ ವಸೂಲಾದ ಹಣ ಆಯಾಯ ಕಾಲೇಜಿನ ಅವಶ್ಯಕತೆಗೂ ಮೀರಿದ್ದರೂ ಸಹ ಸರ್ಕಾರದ ಪರವಾನಿಗೆ ಇಲ್ಲದಿರುವುದರಿಂದ ಕಾಲೇಜುಗಳ ಪ್ರಯೋಗ ಶಾಲೆಗಳು ಸಣ್ಣ ಸಣ್ಣ ವಿಷಯಕ್ಕೂ ಪರದಾಡುತ್ತಿರುವ ವಿಷಯ ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಈ) ಹಾಗಿದ್ದಲ್ಲಿ ಈ ವಿಷಯದ ಬಗ್ಗೆ ಸರ್ಕಾರದವರು ಕೈಕೊಳ್ಳುವ ಕ್ರಮವೇನು?

ಶ್ರೀ ಜೀವರಾಜ್ ಆಳ್ವ (ಉನ್ನತ ಶಿಕ್ಷಣ ಮಂತ್ರಿಗಳು).—

ಅ) ಬಂದಿದೆ.

ಆ) ಬಂದಿದೆ.

ಇ) ಕಿರಿಯ ಕಾಲೇಜುಗಳು ಸ್ವಲ್ಪ ತೊಂದರೆಪಡುತ್ತಿವೆ.

ಈ) ಈ ತೊಂದರೆಯನ್ನು ನಿವಾರಿಸಲು ಪರಿಶೀಲಿಸಿ ಕ್ರಮ ತೆಗೆದುಕೊಳ್ಳಲಾಗುವುದು.